**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 156/2026**

**ಪಿ. ಡಬ್ಲ್ಯೂ:1**

ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ14.08.2026

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ.

ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಚಾರಗಳು ಸತ್ಯವಾಗಿದ್ದು ಅವು ನನಗೆ ತಿಳಿದಿದ್ದು ಹಾಗೂ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇರುತ್ತದೆ. ನಾನು ಕೆಲವೊಂದು ದಾಖಲೆಗಳನ್ನು ಹಾಜರುಪಡಿಸಿದ್ದು ಅದನ್ನು ನಿಶಾನೆಗೆ ಒಳಪಡಿಸಬೇಕಾಗಿ ಪ್ರಾರ್ಥನೆ.

ಒಂದು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿಃ1 ಎಂದು, ಆಧಾರ ಕಾರ್ಡ ನಿಪಿಃ2 ಎಂದು , ಪಡಿತರ ಚೀಟಿ ನಿಪಿಃ 3 ಎಂದು , ಪಾನ್ ಕಾರ್ಡಃ 4 ಎಂದು, ಪಾಸ್ ಬುಕ್ ನಿಪಿಃ 5 ಎಂದು, ಶಾಲಾ ದಾಖಲಾತಿ ನಿಪಿಃ6 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಎಜಿಪಿ ವಕೀಲರಿಂದ ಪ್ರತಿವಾದಿಗಳ ಪರ ವಕೀಲರುಃ**

ಉತಾರದಲ್ಲಿ ನನ್ನ ಸರಿಯಾದ ಹೆಸರನ್ನು ನಮೂದಿಸಲು ಈ ದಾವೆ ಸಲ್ಲಿಸಿರುತ್ತೇನೆ. ನಾನು ಎಸ್ ಎಸ್ ಎಲ್ ಸಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನನ್ನ ಜಮಿನು ಕಳಸ ಗ್ರಾಮದಲ್ಲಿ ಇದೆ. ಈಗ 3 ತಿಂಗಳ ಹಿಂದೆ ಪಹಣಿ ಪತ್ರಿಕೆಯಲ್ಲಿ ನನ್ನ ಹೆಸರು ತಪ್ಪಾಗಿ ನಮೂದಾಗಿರುವುದು ಗೊತ್ತಾಗಿದೆ. ನಮ್ಮ ಕುಟುಂಬಕ್ಕೆ ತಗಡಿನಮನಿ ಎಂಬ ಅಡ್ಡ ಹೆಸರಿಂದ ಕರೆಯುತ್ತಾರೆ. ಪಹಣಿ ಪತ್ರಿಕೆಯಲ್ಲಿ ನನ್ನ ಅಡ್ಡ ಹೆಸರು ಸಪ್ಪಾದ ಕುರಿತು ಪ್ರತಿವಾದಿಯರಿಗೆ ತಿಳಿಸಿರುತ್ತೇನೆ. ಪ್ರತಿವಾದಿಂನುರು ನ್ಯಾಯಲಾಯದ ಆದೇಶ ಇದ್ದರೆ ಮಾತ್ರ ಪಹಣಿ ಪತ್ರಿಕೆಯಲ್ಲಿ ಹೆಸರನ್ನು ಸರಿ ಮಾಡಿ ಕುರಿತು ಮುಃಖಿಕವಾಗಿ ತಿಳಿಸಿರುತ್ತಾರೆ. ನನಗೆ ತಗಡಿನಮನಿ ಎಂಬ ಅಡ್ಡ ಹೆಸರಿನ ಕುರಿತು ದಾಖಲೆ ಸಲ್ಲಿಸಿರುತ್ತೇನೆ. ನಾನು ದುರ್ಲಾಬ ಪಡೆಯಲು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

( ಮರು ವಿಚಾರಣೆ ಇಲ್ಲ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು

ಕುಂದಗೋಳ.